# ಸ್ವಾಮಿ ಭೂತೇಶಾನಂದ
## (೧೯೦೧-೧೯೯೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

### ಭಾಗ-೧

**ಮಾ**ನವನು ಮನನಶೀಲನು. ಮನುಷ್ಯನು ಮಾತ್ರ ಮನನ ಅಥವ ಚಿಂತನೆಯನ್ನು ಮಾಡಬಲ್ಲನು. ಅವನ ಮನಸ್ಸಿನಲ್ಲಿ ಅಸಂಖ್ಯ ಚಿಂತನೆಗಳು ಕ್ರಮವಾಗಿ ಅಲೆಗಳಂತೆ ಅಥವಾ ವೃತ್ತಿರೂಪದಲ್ಲಿ ಎದ್ದು , ತಮ್ಮ ಗುರುತನ್ನು ಬಿಟ್ಟು ವಿಲೀನವಾಗುತ್ತವೆ. ಈ ವೃತ್ತಿಗಳು ಸ್ಮೃತಿಗಳಾಗಿ ಚಿತ್ತದ ಮೇಲೆ ಉಳಿಯುತ್ತವೆ. ವ್ಯಕ್ತಿಯ ಜೀವನದಲ್ಲಿ ಈ ಸ್ಮೃತಿಗಳ ಮೌಲ್ಯವು ಅಗಾಧವಾದುದು. ಕೈ-ಕಾಲುಗಳು ಮುರಿದರೆ ಅವುಗಳನ್ನು ಜೋಡಿಸಬಹುದು, ಕಣ್ಣು-ಕಿವಿಗಳು ನಷ್ಟವಾದರೆ ಮನುಷ್ಯನು ಸಾಯುವುದಿಲ್ಲ. ಆದರೆ ಸ್ಮರಣಶಕ್ತಿಯನ್ನು ಕಳೆದುಕೊಂಡವನ ಜೀವನವೇ ಸ್ತಬ್ಧವಾದಂತೆ. ಸ್ಮರಣೆ ಎಂದಿಗೂ ವರ್ತಮಾನ-ಭವಿಷ್ಯತ್ತುಗಳಿಗೆ ಸಂಬಂಧಪಟ್ಟದ್ದಲ್ಲ — ಅದು ಭೂತಕಾಲಕ್ಕೆ ಸಂಬಂಧಿಸಿದ್ದು. ಮತ್ತೆ ಹೇಳುವುದಾದರೆ ಸ್ಮೃತಿಗಳಲ್ಲಿ ತಾರತಮ್ಯವಿದೆ. ಅಂದರೆ, ಕೆಲವು ಸ್ಮೃತಿ, ನೆನಪುಗಳು ಮಂದವಾಗಿಯೂ ಮತ್ತೆ ಕೆಲವು ಆಳವಾಗಿಯೂ ಇರುವುವು. ನಮ್ಮ ಜೀವನದಲ್ಲಿ ಹೆಚ್ಚಿನ ಪ್ರಭಾವ ಬೀರದವರ ನೆನಪುಗಳು ಶೀಘ್ರವಾಗಿ ಮ್ಲಾನವಾಗುತ್ತವೆ. ಆದರೆ ನಮಗೆ ಅತ್ಯಂತ ಪ್ರಿಯರಾದವರ ನೆನಪುಗಳು ಉಜ್ವಲವಾಗಿ ಉಳಿದಿರುತ್ತದೆ. ಸ್ವಾಮಿ ಭೂತೇಶಾನಂದಜಿಯವರು ಇಪ್ಪತ್ತು ವರ್ಷಗಳ ಹಿಂದೆ ಮಹಾಸಮಾಧಿಯನ್ನು ಹೊಂದಿದ್ದರೂ ಅವರ ನೆನಪುಗಳು ಅನೇಕ ಜನರ ಮನದಲ್ಲಿ ಜೀವಂತವಾಗಿ ಉಳಿದಿವೆ.

ದೀರ್ಘ ಮೂವತ್ತೆಂಟು ವರ್ಷಗಳ ಕಾಲ (೧೯೬೦ರಿಂದ ೧೯೯೮)ರ ವರೆಗೆ ಬಿಡದೆ ಅವರೊಂದಿಗೆ ಒಡನಾಟದ ಸಂದರ್ಭವಿದ್ದರೂ, ನನಗವರೊಡನೆ ಆತ್ಮೀಯ ಸಂಬಂಧವಿತ್ತು. ಅವರ ಪವಿತ್ರ ಜೀವನ ಹಾಗೂ ಉಪದೇಶಗಳು ನನ್ನ ವೈಯಕ್ತಿಕ ಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಇವುಗಳಲ್ಲಿ ಕೆಲವನ್ನು ನಾನು ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದೇನೆ. ಅವರು ಬರೆದಿರುವ ಕೆಲವು ಪತ್ರಗಳೂ ನನ್ನಲ್ಲಿವೆ. ಅವರೊಡನೆ ನಡೆದ ಕೆಲವು ಸಂಭಾಷಣೆಗಳನ್ನು ಟೇಪ್-ರೆಕಾರ್ಡರ್‌ನಲ್ಲಿ ಹಿಡಿದಿಟ್ಟುಕೊಂಡಿರುವೆ. ಅದೇನೇ ಇರಲಿ, ದೀರ್ಘಕಾಲದಲ್ಲಿ ಸಂಭವಿಸಿದ ಎಲ್ಲ ಘಟನೆಗಳು ನನ್ನ ನೆನಪಿನಲ್ಲಿ ಇರದಿದ್ದರೂ ಪ್ರಾಸಂಗಿಕವಾದುವುಗಳನ್ನು ಬರೆಯುವ ಪ್ರಯತ್ನವನ್ನು ಮಾಡುತ್ತೇನೆ.



ಮಹಾರಾಜರನ್ನು ನಾನು ೧೯೬೦ರ ಜೂನ್ ೧೪ ರಂದು ಮೊದಲ ಬಾರಿ ಅದ್ವೈತ ಆಶ್ರಮದಲ್ಲಿ ಕಂಡೆ. ಆಗ ಅವರು ರಾಜಕೋಟ್ ಆಶ್ರಮದಿಂದ ಅಲ್ಲಿಗೆ ಬಂದಿದ್ದರು. ನಾನಾಗ ಬ್ರಹ್ಮಚಾರಿಯಾಗಿದ್ದೆ; ಅದ್ವೈತ ಆಶ್ರಮವು ೪, ವೆಲಿಂಗ್‌ಟನ್ ಲೇನ್‌ನಲ್ಲಿತ್ತು . ಪ್ರತಿದಿನವೂ ರಾತ್ರಿ ಊಟವಾದ ಬಳಿಕ ಕ್ಲಾಸ್ ನಡೆಯುತ್ತಿತ್ತು. ಪೂಜನೀಯ ಗಂಭೀರಾನಂದಜಿಯವರು ಅದ್ವೈತ ಆಶ್ರಮದ ಅಧ್ಯಕ್ಷರಾಗಿದ್ದರು. ಸ್ವಾಮಿ ಭೂತೇಶಾನಂದಜಿಯವರು ದಿನಾ ಕ್ಲಾಸಿನ ನಂತರ ಶ್ರೀರಾಮಕೃಷ್ಣರ ನೇರ ಶಿಷ್ಯರ ಸ್ಮೃತಿಕಥೆಗಳನ್ನು ಹೇಳುತ್ತಿದ್ದರು. ಅವರೆಲ್ಲರ ತ್ಯಾಗ-ವೈರಾಗ್ಯ ಹಾಗೂ ಸಣ್ಣ-ಪುಟ್ಟ ಘಟನೆಗಳನ್ನು ಅದೆಷ್ಟು ಹೃದಯಂಗಮವಾಗಿ ವರ್ಣಿಸುತ್ತಿದ್ದರು! ನಾನು ಅವುಗಳನ್ನು ಸಂಕ್ಷಿಪ್ತವಾಗಿ ಡೈರಿಯಲ್ಲಿ ಬರೆದಿಟ್ಟುಕೊಳ್ಳುತ್ತಿದ್ದೆ . ಸುಮಾರು ೪೦ ವರ್ಷಗಳ ಹಿಂದಿನ ಈ ನೋಟ್ಸ್‌ಗಳಿಂದ ಕೆಲವನ್ನು ಆಯ್ದು ಈಗ ಬರೆಯುತ್ತಿರುವೆ.

### ಜೂನ್ ೧೪, ೧೯೬೦, ಅದ್ವೈತ ಆಶ್ರಮ ಕಲ್ಕತ್ತ

ಸ್ವಾಮಿ ತುರೀಯಾನಂದಜೀ (ಹರಿ ಮಹಾರಾಜರನ್ನು) ಕುರಿತು ಭೂತೇಶಾನಂದಜಿಯವರು ಹೀಗೆ ಹೇಳಿದರು: ''ಅವರು ತಪಸ್ಸಿಗೆ ಬಹಳ ಪ್ರಾಮುಖ್ಯತೆ ನೀಡುತ್ತಿದ್ದರು. ಅವರನ್ನು ನೋಡಿದರೆ, blazing fire - ಉರಿಯುವ ಬೆಂಕಿಯಂತಿದ್ದರು! ಅವರು ನೆಟ್ಟಗೆ ಎದೆಯುಬ್ಬಿಸಿ ಕುಳಿತು ದೃಷ್ಟಿ ಹಾಯಿಸುತ್ತಿರುವುದನ್ನು ಕಂಡಾಗ ಪ್ರಪಂಚ ಅವರಿಗೆ ಅತಿ ತುಚ್ಛವೇನೋ ಎಂಬಂತೆ ಭಾಸವಾಗುತ್ತಿತ್ತು . ಎಂಥ ಉಪೇಕ್ಷೆಯ ದೃಷ್ಟಿ!

''ಹರಿ ಮಹಾರಾಜರು ಒಂದು ದಿನ ಬಲರಾಮ ಮಂದಿರದಲ್ಲಿ ಹೇಳಿದರು, 'ಬ್ರಾಹ್ಮಣ ಶರೀರವಿರುವುದು ತಪಸ್ಸಿಗಾಗಿ, ಈ ಶರೀರದಿಂದ ಮತ್ತಾವ ಉಪಯೋಗವೂ ಇಲ್ಲ'. 'ಉದ್ಬೋಧನ' ಪ್ರಕಾಶನದ ಪುಸ್ತಕವೊಂದರಲ್ಲಿ 'ತ್ವಂ' ಪದದ ಬದಲಾಗಿ 'ತಂ' ಎಂದು ಮುದ್ರಿಸಲಾಗಿರುವುದನ್ನು ಕಂಡು ಬಹಳ ಕ್ಷುಬ್ಧರಾಗಿ ದುಃಖವನ್ನು ಪ್ರಕಟಿಸುತ್ತ, 'ಅದೆಂಥ ಮೂರ್ಖರು ಇಲ್ಲಿ ಸಭೆ ಸೇರಿರುವರು ಎಂದು ಜನರು ಆಡಿಕೊಳ್ಳುವರು' ಎಂದರು.''

### ಜೂನ್ ೧೫, ೧೯೬೦, ಅದ್ವೈತ ಆಶ್ರಮ, ಕಲ್ಕತ್ತ

ಇಂದು ಭೂತೇಶಾನಂದಜಿಯವರು ಶರತ್ ಮಹಾರಾಜರ (ಸ್ವಾಮಿ ಶಾರದಾನಂದ) ವಿಶಾಲ ಹೃದಯವನ್ನು ಪ್ರಶಂಸಿಸುತ್ತ ಹೇಳಿದರು, ''ಅವರ ಮನಸ್ಸು ಅತ್ಯಂತ ಮೃದುವಾಗಿತ್ತು. ಅವರು ಎಲ್ಲರಿಗೂ ಆಶ್ರಯವನ್ನು ನೀಡುತ್ತಿದ್ದರು. ಯಾವುದೇ ಸಹಾಯವನ್ನು ಬೇಡಿಬಂದವರಿಗೆ ಬೇಕಾದ ನೆರವನ್ನು ನೀಡಿ ಅವರನ್ನು ಪ್ರೋತ್ಸಾಹಿಸುತ್ತಿದ್ದರು. 'ಉದ್ಬೋಧನ'ದಲ್ಲಿ ಶ್ರೀಮಾತೆಯವರ ದ್ವಾರಪಾಲಕರಾಗಿದ್ದು, ಅಲ್ಲಿಯೇ ಮಹಾಸಮಾಧಿಯನ್ನು ಹೊಂದಿದರು.''

ಮಹಾಪುರುಷ ಮಹಾರಾಜರ (ಸ್ವಾಮಿ ಶಿವಾನಂದಜಿಯವರ) ಬಗ್ಗೆ ಹೇಳಿದರು: ''ಒಂದು ದಿನ ದೀಕ್ಷೆ ಮುಗಿದ ನಂತರ ಒಬ್ಬ ಮಹಿಳೆಯು, 'ಇದು ದೀಕ್ಷೆಯೆ?' ಎಂದಾಗ ಮಹಾಪುರುಷ ಮಹಾರಾಜರು, 'ನಾಳೆ ಮತ್ತೆ ಬಾ' ಎಂದರು. ಮರುದಿನ ಆಕೆಯನ್ನು ಮೃದುವಾಗಿ ಸ್ಪರ್ಷಿಸಿದಾಗ ಆಕೆಗೆ ಗಂಭೀರ ಆಧ್ಯಾತ್ಮಿಕ ಅನುಭೂತಿಯಾಯಿತು.

''ಇನ್ನೊಂದು ದಿನ ಮಹಾಪುರುಷ ಮಹಾರಾಜರು ಮಠದ ಅಂಗಳದಲ್ಲಿ ನಡೆಯುತ್ತಿದ್ದಾಗ ಒಬ್ಬರು ಬಂದು ಅವರಿಗೆ ಪ್ರಣಾಮ ಮಾಡಿದರು. ಮಹಾರಾಜರಿಗೆ ಎಡವಿ ಬೀಳುವಂತಾಯಿತು. ವ್ಯಕ್ತಿಯು ಗಾಬರಿಗೊಂಡಾಗ ಮಹಾರಾಜರು, ''ನನಗೆ ಏನೂ ಕಾಣುವುದಿಲ್ಲವೆಂದು ಪಾಪ, ಅವನಿಗೆ ಹೇಗೆ ತಾನೆ ಗೊತ್ತಾಗಬೇಕು,'' ಎಂದು ಉದ್ಗರಿಸಿದರು. ಅವರು ಸದಾ ಅಂತರ್ಮುಖಿಯಾಗಿರುತ್ತಿದ್ದರು.

''ಮತ್ತೊಂದು ದಿನ ಇತರ ಸಂಪ್ರದಾಯಕ್ಕೆ ಸೇರಿದ ಒಬ್ಬ ಸಾಧುಗಳು ರಾತ್ರಿ ಬೇಲೂರು ಮಠದಲ್ಲಿ ತಂಗಿದರು. ಆ ಸಾಧುವೂ, ಮಹಾಪುರುಷ ಮಹಾರಾಜರೂ ಪರಸ್ಪರ ಜ್ಞಾನಿಯೆಂದು ಒಬ್ಬರನ್ನೊಬ್ಬರು ಗುರುತಿಸಿದರು.

''ಮಹಾಪುರುಷ ಮಹಾರಾಜರು ಸಂಘದ ಕಷ್ಟಕರವಾದ ಆಪತ್ಕಾಲಗಳಲ್ಲಿ ಅವಿಚಲರಾಗಿದ್ದರು. ಠಾಕೂರರ ಮೇಲೆ ಎಷ್ಟು ದೃಢವಿಶ್ವಾಸ ಅವರಿಗೆ! ಬೆಳಿಗ್ಗೆ ಪೂಜಾರಿಯು ನಿದ್ರೆಯಿಂದ ಏಳುವುದು ತಡವಾಯಿತೆಂದರೆ ಸ್ವತಃ ಮಂಗಳಾರತಿ ಮಾಡಲು ಹೋಗುತ್ತಿದ್ದರು. ಪರನಿಂದೆ-ಪರಚರ್ಚೆಗಳು ಅವರಿಗೆ ಹಿಡಿಸದು. ''ನೀನು ನಿನ್ನದನ್ನು ನೋಡು'' ಎನ್ನುತ್ತಿದ್ದರು. ಮಠದ ನಾಯಿ, ಹಸುಗಳೆಂದರೆ ಅವರಿಗೆ ಅದೆಷ್ಟು ಸಂವೇದನೆ! ಬಡ ಮೀನುಗಾರರು ಮಠಕ್ಕೆ ಮೀನು ತಂದರೆ, ಅವರು ಕೇಳಿದಷ್ಟು ಬೆಲೆಯನ್ನು ಕೊಟ್ಟುಬಿಡುತ್ತಿದ್ದರು. ಬಡವರೆಂದರೆ ಅದೆಷ್ಟು ಅನುಕಂಪ! ಅವರ ಜನ್ಮದಿನದಂದು ಅವರ ಫೋಟೋ ತೆಗೆಯಲು ಹೋದಾಗ ''ನಿರಾಕಾರದ ಫೋಟೊ ತೆಗೆಯುತ್ತಿದ್ದೀಯೆ!'' ಎಂದಿದ್ದರು.''

### ಜೂನ್ ೧೬, ೧೯೬೦, ಅದ್ವೈತ ಆಶ್ರಮ, ಕಲ್ಕತ್ತ

ಇಂದು ಭೂತೇಶಾನಂದಜಿಯವರು ಸ್ವಾಮಿ ಶುದ್ಧಾನಂದಜಿಯವರ ಬಗ್ಗೆ ಹೇಳಿದರು : ''೧೮೯೭ರಲ್ಲಿ ಸ್ವಾಮೀಜಿ ಕಲ್ಕತ್ತಕ್ಕೆ ಮರಳಿದಾಗ ಸುಧೀರ ಮಹಾರಾಜರು (ಸ್ವಾಮಿ ಶುದ್ಧಾ ನಂದರು) ಕಾಲೇಜು ವಿದ್ಯಾರ್ಥಿಗಳೊಡಗೂಡಿ ಅವರ ಗಾಡಿಯನ್ನೆಳೆದರು. ವಿದ್ಯೆಯೆಂದರೆ ಅಪಾರ ನಿಷ್ಠೆ ಅವರಿಗೆ. ಅವರು ಬಹಳ ಬೌದ್ಧಿಕ ಪ್ರಾಮಾಣಿಕತೆ ಉಳ್ಳವರಾಗಿದ್ದರು. ಏನಾದರೂ ವಿಷಯ ತಿಳಿಯದಿದ್ದರೆ ''ನನಗೆ ಗೊತ್ತಿಲ್ಲ'' ಎಂದು ಹೇಳುತ್ತಿದ್ದರು. ಅವರೆಂದೂ ಸುತ್ತುಬಳಸಿ ಮಾತನಾಡುವುದಾಗಲಿ ಪ್ರತಿವಾದವನ್ನಾಗಲಿ ಮಾಡುತ್ತಿರಲಿಲ್ಲ; ತುಂಬ straight forward ಆಗಿದ್ದರು. ಸ್ವಾಮೀಜಿಯವರ ಎದುರು 'ಆತ್ಮ'ದ ಸಂಬಂಧವಾಗಿ ಅರ್ಧಗಂಟೆ ಭಾಷಣವನ್ನು ಮಾಡಿದ್ದರು.

''ಅವರು ಸಾಧುವಾಗಬೇಕೆಂದು ಇಚ್ಛೆಪಟ್ಟಾಗ ಅವರ ತಂದೆ ಅವರನ್ನು ಕೋಣೆಯಲ್ಲಿ ಬಂಧಿಸಿದ್ದರು. ಓದು-ಬರಹವೇ ಅವರಿಗೆ ವಿಶ್ರಾಂತಿ. ಸ್ವಾಮೀಜಿಯವರ ಅನೇಕ ಲೇಖನಗಳನ್ನು ಅವರು ಅನುವಾದಿಸಿದ್ದರು. ಅವರು ಬಹಳ ಹಾಸ್ಯಪ್ರಿಯರೂ ಆಗಿದ್ದರು. ''ರಾಮಕೃಷ್ಣರ ಶಿಷ್ಯರು ನಾವು । ಬರಿಯ ತಿಂದುಣ್ಣುವ ಸಮಯದಿ ನಾವು । ಗರ್ವದಿಂದ ಹೇಳ್ವೆವು ನಾವು'' ಎಂದು ತಮಾಷೆಯಾಗಿ ಹಾಡುವರು.

''ಸುಧೀರ ಮಹಾರಾಜರು ಅತ್ಯಂತ ಸಹಜ-ಸರಳ ಸ್ವಭಾವದವರು. ಒಂದು ದಿನ ಸ್ವಾಮೀಜಿಯವರ ಬಳಿ ಸಾರಿ, 'ನಾನು ತಪಸ್ಸು ಮಾಡಬೇಕು' ಎಂದಾಗ ಸ್ವಾಮೀಜಿಯವರು ಅನುಮತಿ ನೀಡಿದರು. ರಾತ್ರಿಯೆಲ್ಲ ಮರದಡಿಯಲ್ಲಿ ಕುಳಿತ ಅವರಿಗೆ ಮರುದಿನ ನೆಗಡಿಯೋ ನೆಗಡಿ!

''ವ್ಯಕ್ತಿಯೊಬ್ಬರು ಅವರನ್ನು ''ಸಂನ್ಯಾಸಿಯಾಗಿ ಕಾವಿ ಧರಿಸಿರಬೇಕೆ?'' ಎಂದು ಪ್ರಶ್ನಿಸಿದಾಗ ಸುಧೀರ ಮಹಾರಾಜರ

ಉತ್ತರ ಹೀಗಿತ್ತು: 'ಪ್ರತಿಯೊಬ್ಬರೂ ಒಂದಲ್ಲ ಒಂದು ದಿನ ಈ ಪ್ರಪಂಚವನ್ನು ಬಿಟ್ಟು ಹೋಗಲೇಬೇಕು. ಮನೆಯಲ್ಲಿದ್ದರೆ ಆ ಅಂತಿಮ ಕರೆ ಕೇಳಿದಾಗ ಬಿಟ್ಟು ಹೋಗಲು ಕಷ್ಟವೆನಿಸುತ್ತದೆ. ಆದ್ದರಿಂದಲೇ ಎಲ್ಲವನ್ನೂ ತೊರೆದು ಕಾವಿ ಧರಿಸಿ, ಹೋಗಲು ಅಣಿಯಾಗಿ ಕುಳಿತಿರುವೆ.' ''

ಅಂದು ಖೋಕಾ ಮಹಾರಾಜ್-ರ(ಸ್ವಾಮಿ ಸುಬೋಧಾನಂದರ) ಬಗ್ಗೆಯೂ ಮಾತನಾಡಿದರು: ''ಖೋಕಾ ಮಹಾರಾಜರು ತುಂಬ ವಿನೋದಪ್ರಿಯರಾಗಿದ್ದರು. ಸದಾ ಹಸನ್ಮುಖಿಯಾಗಿರುತ್ತಿದ್ದರು. ವೀರರಂತೆ ನಡೆದಾಡುತ್ತಿದ್ದರು. ಅನೇಕ ಸಲ ಸ್ಟೀಮರ್‌ನ ಒಂದು ತಿಂಗಳ ಟಿಕೆಟ್ ಖರೀದಿಸಿ ಸುತ್ತಾಡಲು ಹೋಗುತ್ತಿದ್ದರು. ಒಮ್ಮೆ ಕೆಲವು ಯುವಕರು ಬೇಲೂರು ಮಠವನ್ನು ನಿಂದಿಸಿದಾಗ ಅವರನ್ನು ಚೆನ್ನಾಗಿ ಬೈದು, 'ಬೇಲೂರು ಮಠವು ಆರಾಮದ ಸ್ಥಳವಾಗಿದ್ದರೆ, ಅಲ್ಲಿ ಬಂದು ಇರಿ,' ಎಂದರು.

''ಸ್ವಾಮೀಜಿಯವರು ಖೋಕಾ ಮಹಾರಾಜರಿಗೆ ತಬಲಾ ಕಲಿಸುವಾಗ, ಒಂದು ಪ್ರಾಸಬದ್ಧ ವಿನೋದಪ್ರದ ಶಿಶುಗೀತೆಯನ್ನಾಡುತ್ತ ತಾಳವನ್ನು ಹೇಳಿಕೊಟ್ಟಿದ್ದರು.

''ಯಾರಾದರೂ ಅವರನ್ನು ಠಾಕೂರರ (ಶ್ರೀರಾಮಕೃಷ್ಣರ) ಬಗ್ಗೆ ಮಾತನಾಡಲು ಪೀಡಿಸಿದರೆ ಖೋಕಾ ಮಹಾರಾಜರು ಗಂಭೀರ ಭಾವ ತಾಳಿ, 'ಠಾಕೂರರ ಬಗ್ಗೆ ಯಾರು ತಾನೇ ಕೇಳಬಯಸುತ್ತಾರೆ!' ಎಂದು ಹೇಳಿ ಸುಮ್ಮನಾಗುವರು.''

### ಜೂನ್ ೨೧, ೧೯೬೦, ಅದ್ವೈತ ಆಶ್ರಮ, ಕಲ್ಕತ್ತ

ಈ ದಿನ ಸ್ವಾಮಿ ಭೂತೇಶಾನಂದಜಿಯವರು ಉತ್ತರಕಾಶಿಯ ವಿಭಿನ್ನ ಸಾಧು-ಸಂಪ್ರದಾಯದ ಬಗ್ಗೆ ಹಾಗೂ ತಮ್ಮದೇ ತಪಸ್ಸಿನ ಕುರಿತು ಹೇಳಿದರು: ''ಎಷ್ಟೊಂದು ಬಗೆಯ ಸಾಧುಗಳಿದ್ದಾರೆ. ಧ್ಯಾನ-ಮಗ್ನರಾದ ಧ್ಯಾನಿ ಸಾಧುಗಳೂ ಇರುವರು, ಮತ್ತೆ ಕೈಗೆ ಗಡಿಯಾರ ಕಟ್ಟಿಕೊಂಡು ರೇಡಿಯೋ ಹಿಡಿದು ಅಲೆದಾಡುವ ಸಾಧುಗಳೂ ಇರುವರು. ಪಾಲಿಟೀಶಿಯನ್ ಸಾಧುಗಳು ಗುಂಪು ಸೇರಿಸುತ್ತಾರೆ. ಕೈಲಾಸದ ಪಥದಲ್ಲಿ ಒಬ್ಬ ನಾಗಸಾಧು ಮತ್ತೊಬ್ಬ ಸಾಧುವಿನೊಡನೆ ಜಗಳ ಮಾಡುತ್ತ ಅವನನ್ನು ನೀರಿಗೆ ತಳ್ಳಿದನು. ಒಬ್ಬ ಸಾಧು ಮತ್ತೊಬ್ಬ ಸಾಧುವಿನ ಮೇಲೆ ಕರುಣೆ ತೋರುತ್ತ ತಮ್ಮ ಕಂಬಳಿಯನ್ನು ಅವನಿಗೆ ಕೊಟ್ಟುಬಿಟ್ಟನು. ಮತ್ತೆ ಹುಚ್ಚ ಸಾಧುಗಳೂ ಇದ್ದಾರೆ, ಪಂಡಿತ ಸಾಧುಗಳೂ ಇದ್ದಾರೆ.'' ಮಹಾರಾಜರ ಸ್ಮೃತಿ ಹಾಗೂ ಗಮನಿಸುವ ಶಕ್ತಿಗಳು ಅದ್ಭುತವೆಂದೇ ಹೇಳಬೇಕು.

ಮಹಾರಾಜರು ಪ್ರತಿದಿನ ಬೆಳಗಿನ ಉಪಾಹಾರದ ಬಳಿಕ ಬೇಲೂರು ಮಠಕ್ಕೆ ಹೋಗಲು ಸಿದ್ಧರಾಗುತ್ತಿದ್ದರು. ಅವರು ಹೋಗದಂತೆ ನಾನವರ ಚಪ್ಪಲಿಗಳನ್ನು ಬಚ್ಚಿಡುತ್ತಿದ್ದೆ. ನಮ್ಮನ್ನು ಉದ್ದೇಶಿಸಿ ಅವರು, ''ನೀವುಗಳು ಬಹಳ ತುಂಟರು. ನನಗೆ ಮಠಕ್ಕೆ ಹೋಗಲು ಬಿಡಿ'' ಎನ್ನುತ್ತಿದ್ದರು. ನಾನೆನ್ನುತ್ತಿದ್ದೆ, ''ನಾಳೆ ಹೋದರಾಯಿತು?'' ಆದರೆ ಮರುದಿನ ಅವರ ಬನಿಯನ್ನು ಹಾಗೂ ಇತರ ಬಟ್ಟೆಗಳನ್ನು ಸಾಬೂನು ನೀರಿನ ಬಕೆಟ್ಟಿನಲ್ಲಿ ನೆನೆಸಿಟ್ಟು ಹೇಳುತ್ತಿದ್ದೆ, ''ನಿಮ್ಮ ಬಟ್ಟೆಗಳೆಲ್ಲ ಕೊಳಕಾಗಿದೆ. ನಾಳೆ ಹೋಗಿ.'' ''ನೋಡು, ನೋಡು. ಇವತ್ತೂ ನೀವು ನನಗೆ ಹೋಗಲು ಬಿಡುತ್ತಿಲ್ಲ. ನಿರ್ಮಲ್ ಮಹಾರಾಜ್ (ಸ್ವಾಮಿ ಮಾಧವಾನಂದಜಿ) ಏನೆಂದುಕೊಂಡಾರು!''

ಕಳೆದು ಹೋದ ಆ ಹಿಂದಿನ ದಿನಗಳನ್ನು ನೆನೆಸಿಕೊಂಡರೆ ಅದೆಷ್ಟು ಆನಂದ! ಆ ಪ್ರಥಮ ದರ್ಶನದಿಂದಲೆ ಅವರೊಡನಿದ್ದ ಆತ್ಮೀಯ ಸಂಬಂಧ ಮತ್ತಾವ ಸಾಧುವಿನೊಡನೆಯೂ ನನಗಿರಲಿಲ್ಲ.

ಮಹಾರಾಜರು ರಾಜಕೋಟ್ ಕೇಂದ್ರದ ಮಹಂತ (ಅಧ್ಯಕ್ಷ)ರಾಗಿದ್ದಾಗ ೧.೧೦.೧೯೬೦ರಂದು ನನಗೆ ಬರೆದಿದ್ದರು:

''ಠಾಕೂರರು ನಮ್ಮ ಇಡೀ ಸಂಘವನ್ನು ಈ ರೀತಿಯ ಪವಿತ್ರ ಹಾಗೂ ಮಧುರವಾದ ಸ್ನೇಹಬಂಧನದಲ್ಲಿ ಬಂಧಿಸಲಿ. ಇಲ್ಲದಿದ್ದರೆ, ಸಂಘ ಜೀವನವು ಅರ್ಥಹೀನವಾಗುವುದು.

''ಶ್ರೀರಾಮಕೃಷ್ಣರು, ಸ್ವಾಮೀಜಿಯವರು ನಮ್ಮ ಜೀವನದ ಆದರ್ಶವಾಗಿದ್ದಾರೆ. ಅವರು ನಮ್ಮ ಸಂಕೀರ್ಣ ಸೀಮೆಯನ್ನು ಮೀರಿದವರಾದರೂ, ಅವರ ಅಚ್ಚಿನಲ್ಲಿ ಎರಕ ಹೊಯ್ದು ನಮ್ಮನ್ನು ರೂಪಿಸಿಕೊಂಡಾಗ ನಮ್ಮ ಸಾಧನೆಯು ಸಾರ್ಥಕವೂ, ಜೀವನವು ಪರಿಪೂರ್ಣವೂ ಆಗುತ್ತದೆ. ಅಪೂರ್ಣರಾಗಿದ್ದುಕೊಂಡು ನಿರಂತರ ಆನಂದವನ್ನು ಪಡೆಯುವುದು ಯಾರಿಗೂ ಸಾಧ್ಯವಿಲ್ಲವಾದರೂ ಆದರ್ಶವನ್ನು ತಲುಪಲು ಪ್ರಾಣವಿರುವ ತನಕ ಪ್ರಯತ್ನವನ್ನು ಮಾಡಬೇಕು. ಅದರಿಂದ ಆನಂದವೇ ಆಗಲಿ, ನಿರಂತರ ದುಃಖವೇ ಆಗಲಿ, ಬರಲಿ. 'ರಾಮನು ಸಿಗಲಿಲ್ಲವೆಂದು ಶ್ಯಾಮೆಯೊಡನೆ ಇರಬೇಕೆ?' ಎಂಬ ಸ್ವಾಮೀಜಿಯವರ ಮಾತುಗಳನ್ನು ಜ್ಞಾಪಕದಲ್ಲಿರಿಸಿಕೊ. ನಾವು ದುರ್ಬಲರಾಗಿದ್ದರೂ ಅವರ ಅನಂತ ಶಕ್ತಿಯು ನಮ್ಮನ್ನು ಖಂಡಿತವಾಗಿ ಕಾಪಾಡುತ್ತದೆ. ಆದ್ದರಿಂದ ಭಯಪಡಬೇಡ.''

೧೯೬೧ರಲ್ಲಿ ಸ್ವಾಮಿ ಮಾಧವಾನಂದಜಿಯವರು ಮಿದುಳಿನ ಶಸ್ತ್ರಚಿಕಿತ್ಸೆಗೆಂದು ಅಮೆರಿಕಾಗೆ ಹೊರಟಾಗ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಭಾರತದ ವಿಭಿನ್ನ ರಾಜ್ಯಗಳಿಂದ ಮಠ-ಮಿಷನ್‌ಗೆ ಸೇರಿದ ಅನೇಕ ಸಾಧುಗಳು ಬೇಲೂರು ಮಠಕ್ಕೆ ಬಂದರು. ಸ್ವಾಮಿ ಮಾಧವಾನಂದಜಿಯವರು ಸಂಘದ ಸುವಿಖ್ಯಾತ ಸಂನ್ಯಾಸಿಗಳೂ ಶ್ರೀಮಾತೆಯವರ ಶಿಷ್ಯರೂ ಆಗಿದ್ದರು. ರಾಜ್‌ಕೋಟ್‌ದಿಂದ ಬಂದಿದ್ದ ಸ್ವಾಮಿ ಭೂತೇಶಾನಂದಜಿಯವರು ಅದ್ವೈತಾಶ್ರಮದಲ್ಲಿ ಕೆಲವು ದಿನ ತಂಗಿದ್ದರು. ೧೯೬೧ರ ಪ್ರಾರಂಭದಲ್ಲಿ ಅದ್ವೈತಾಶ್ರಮವು ೪, ವೆಲ್ಲಿಂಗ್‌ಟನ್ ಲೇನಿನಿಂದ ೫, ಡಿಹಿ ಎಂಟಾಲಿ ರೋಡಿಗೆ ಸ್ಥಾನಾಂತರಗೊಂಡಿತು. ಒಂದು ರವಿ

ವಾರದ ದಿನದಂದು ಗಂಭೀರಾನಂದಜಿ, ಭೂತೇಶಾನಂದರಿಗೆ ಕ್ಲಾಸು ತೆಗೆದುಕೊಳ್ಳಲು ಹೇಳಿದರು. ಭೂತೇಶಾನಂದಜಿಯವರ ಗಂಟಲು ಕೆಟ್ಟಿತ್ತು. ಅವರು ಬಿಸಿನೀರಿಗೆ ಉಪ್ಪು ಸೇರಿಸಿ ಕೆಲವು ಸಲ ಗಾರ್ಗಲ್ ಮಾಡಿದರು. ಅವರ ಸ್ವರ ನಿಜವಾಗಿಯೂ ಚೆನ್ನಾಗಿರಲಿಲ್ಲ. ನಮ್ಮಲ್ಲಿ ಕೆಲವರು ಭಾಷಣ ನೀಡುವುದು ಬೇಡವೆಂದು ಹೇಳಿದರೆ ಅವರು, ''ಇದು ಠಾಕೂರರ ಕೆಲಸ. ನೋಡುತ್ತಿರಿ, ಎಲ್ಲವೂ ಸರಿ ಹೋಗುತ್ತದೆ'' ಎಂದರು. ಒಡೆದ ಗಂಟಲಿನಿಂದಲೆ ಅವರು ಒಂದು ತಾಸು ಮಾತನಾಡಿದರು. ಶರೀರ ಬಾಧೆಯನ್ನು ಮರೆತು ಠಾಕೂರರ ಕಾರ್ಯವನ್ನು ಮಾಡಿದ ಈ ಘಟನೆಯು ತುಚ್ಛವೆನಿಸಿದರೂ, ಇದರಿಂದ ನಾವು ಶಿಕ್ಷಣವನ್ನು ಪಡೆಯಬಹುದು.

ನಂತರವೂ ಮಹಾರಾಜರು ಕೆಲವು ಬಾರಿ ಅದ್ವೈತಾಶ್ರಮಕ್ಕೆ ಬಂದಿದ್ದರು. ಒಂದು ದಿನ ಕಂಖಲ್‌ನ ಮಾಖನ್ ಮಹಾರಾಜರು (ಸ್ವಾಮಿ ಪ್ರಜ್ಞಾನಂದಜಿ) ಹಾಗೂ ಭೂತೇಶಾನಂದಜಿ ಒಟ್ಟಿಗೆ ನಮ್ಮ ಅತಿಥಿಗಳಾಗಿದ್ದಾಗ ಗುಜರಾತಿ ಭಕ್ತರೊಬ್ಬರು ಒಂದು ಪೆಟ್ಟಿಗೆ ಬನಿಯನ್ ಕೊಟ್ಟರು. ಮಾಖನ್ ಮಹಾರಾಜರು ಅದರಿಂದ ಕೆಲವನ್ನು ತೆಗೆದುಕೊಂಡು, ''ಏಯ್ ವಿಜಯ್, ನಿನಗೆ ಎಷ್ಟೊಂದು ಜನ ಧನಿಕ ಭಕ್ತರಿದ್ದಾರೆ. ಈ ಬನಿಯನ್‌ಗಳನ್ನು ನಾನು ತೆಗೆದುಕೊಂಡಿರುವೆ,'' ಎಂದರು. ಭೂತೇಶಾನಂದರು ಹೇಳಿದರು, ''ನೋಡಿ ಮಾಖನ್ ಮಹಾರಾಜ್, ಈ ಬನಿಯನ್‌ಗಳನ್ನು ತೆಗೆದುಕೊಳ್ಳಬೇಡಿ. ನಮ್ಮದು ಬಹಳ ಬಡ ಆಶ್ರಮ. ಭಿಕ್ಷೆಯಿಂದ ನಡೆಯುತ್ತದೆ.'' ಅದಕ್ಕೆ ಮಾಖನ್ ಮಹಾರಾಜರು, ''ಅರೆ, ಆಶ್ರಮವು ಭಿಕ್ಷೆಯಿಂದಲ್ಲದೆ ಮತ್ತೆ ಹೇಗೆ ನಡೆಯುವುದು?'' ಇಬ್ಬರೂ ಬಿಡರು. ನೋಡುತ್ತೇನೆ, ಇಬ್ಬರು ಹಿರಿಯ ಸಾಧುಗಳು ಮಕ್ಕಳಂತೆ ಬನಿಯನ್‌ಗಾಗಿ ಎಳೆದಾಡುತ್ತಿದ್ದಾರೆ!

ಪುಷ್ಪ ಎಂಬ ಮಹಾರಾಜರ ಭಕ್ತ ಮಹಿಳೆಯೊಬ್ಬರು ಕಲ್ಕತ್ತದಲ್ಲಿದ್ದರು. ಅವಳ ಸಣ್ಣ ವಯಸ್ಸಿನಿಂದಲೆ ಮಹಾರಾಜರಿಗೆ ಆಕೆಯ ಪರಿಚಯವಿತ್ತು. ಒಮ್ಮೆ ಆಕೆ ಮಹಾರಾಜರ ದರ್ಶನಕ್ಕೆಂದು ಬಂದಾಗ ನಾನು ವಿನೋದದಿಂದ, ''ನೀವು ಸಾಧು ದರ್ಶನಕ್ಕೆಂದು ಬಂದಿರುವಿರಿ. ಸೇವಿಗೆ-ಹಣ್ಣು-ಸಿಹಿತಿಂಡಿಗಳಿಲ್ಲದೆ ಇದೆಂತಹ ಸಾಧುದರ್ಶನ?'' ಎಂದೆ. ಅವರು ನಕ್ಕು, ಮಾರನೆಯ ದಿನ ಅಧಿಕ ಪರಿಮಾಣದಲ್ಲಿ ಶೇವಿಗೆ-ಹಣ್ಣು ಹಾಗೂ ಸಿಹಿತಿನಿಸುಗಳೊಂದಿಗೆ ಹಾಜರಾದರು. ಮಹಾರಾಜರು ಆಶ್ರಮದಲ್ಲಿದ್ದರೆ, ಆಶ್ರಮವು ತುಂಬಿದಂತಿರುತ್ತಿತ್ತು.

ಮಹಾರಾಜರು ಎಲ್ಲಿಗೆ ಹೋದರಲ್ಲಿ, ಶಾಸ್ತ್ರಗಳ ಬಗ್ಗೆ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದು ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಠಾಕೂರರ ಪಾರ್ಷದರನ್ನು ಕುರಿತ ಘಟನೆಗಳನ್ನು ಹೇಳುತ್ತಿದ್ದರು. ಭಾಗವತ-ಪ್ರಸಂಗಗಳ ಮೂಲಕ ಮನಸ್ಸು ಸ್ವಾಭಾವಿಕವಾಗಿಯೇ ಊರ್ಧ್ವಮುಖಿಯಾಗುವಂಥ ವಾತಾವರಣವನ್ನು ಸೃಷ್ಟಿಸುತ್ತಿದ್ದರು.

ಮಹಾರಾಜರು ರಾಜಕೋಟ್ ಆಶ್ರಮದಿಂದ 'ಶ್ರೀ ರಾಮಕೃಷ್ಣ ವಚನವೇದ'ದ ಗುಜರಾತಿ ಅನುವಾದವನ್ನು ಹೊರ ತಂದರು. ಮಾಸ್ಟರ್ ಮಹಾಶಯರ ಮೊಮ್ಮಗ ಅನಿಲ್ ಗುಪ್ತರಿಂದ ಅನುವಾದದ ಪ್ರಕಟನೆಗಾಗಿ ಅನುಮತಿಯನ್ನು ಪಡೆದು ತಮಗೆ ಕಳುಹಿಸುವಂತೆ ಅವರು ನನಗೆ ಬರೆದರು. ಅನೇಕ ಭಾಷೆಗಳನ್ನು ಅವರು ಬಲ್ಲವರಾಗಿದ್ದು, ಗುಜರಾತಿ 'ವಚನವೇದ'ದ ಪ್ರಧಾನ ಸಂಪಾದಕರಾಗಿದ್ದರು.

೧೯೬೬ರಲ್ಲಿ ಸ್ವಾಮಿ ಭೂತೇಶಾನಂದಜಿಯವರು ರಾಮಕೃಷ್ಣ ಮಠ-ಮಿಷನ್ನಿನ ಸಹ-ಕಾರ್ಯದರ್ಶಿಗಳಾಗಿ ಆಯ್ಕೆ ಹೊಂದಿ, ರಾಜ್‌ಕೋಟ್‌ನಿಂದ ಬೇಲೂರು ಮಠಕ್ಕೆ ಹೋದರು. ಪ್ರತಿ ರವಿವಾರದಂದು ಮಠದ ಲೈಬ್ರರಿಯಲ್ಲಿ ತೆಗೆದುಕೊಳ್ಳುತ್ತಿದ್ದ 'ವಚನವೇದ'ದ ತರಗತಿಗಳಲ್ಲಿ ಅನೇಕ ಜನರು ಉಪಸ್ಥಿತರಿರುತ್ತಿದ್ದರು. ೧೯೭೦ರಲ್ಲಿ ಲಕ್ನೌನ 'ವಿವೇಕಾನಂದ ಪಾಲಿ ಕ್ಲಿನಿಕ್'ನ ಉದ್ಘಾಟನೆಯಾಯಿತು. ಸಮಾರಂಭದಲ್ಲಿ ೧೫೨ ಜನ ಸಾಧುಗಳು ನೆರೆದಿದ್ದರು. ಮಹಾರಾಜರೂ ಹೋಗಿದ್ದರು; ನಾನೂ ಹೋಗಿದ್ದೆ. ಶ್ರೀಧರಾನಂದಜಿಯವರು ತುಂಬ ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದು ನಾವು ಅನೇಕರು ಮಹಾರಾಜರೊಡನೆ ಬಸ್ಸಿನಲ್ಲಿ ಅಯೋಧ್ಯೆ, ನೈಮಿಷಾರಣ್ಯ ಹಾಗೂ ಬ್ರಹ್ಮಾವರ್ತಗಳನ್ನು ಸಂದರ್ಶಿಸಲು ಹೋದೆವು. ರಾಮನ ಜನ್ಮಸ್ಥಳದ ದರ್ಶನದ ಬಳಿಕ ಸರಯೂ ನದಿಯಲ್ಲಿ ಮಿಂದು, ತಿಂಡಿ ತಿನ್ನಲೆಂದು ಹೋದಾಗ ನೋಡುತ್ತೇವೆ, ರಾಮಭಕ್ತ ಹನುಮರು ಬಸ್ಸಿನೊಳಗೆ ನುಗ್ಗಿ ನಮ್ಮ ತಿಂಡಿಯ ಪ್ಯಾಕೇಟ್‌ಗಳನ್ನು ಚೆಲ್ಲಾಪಿಲ್ಲಿ ಮಾಡಿವೆ! ಆದರೆ ಮಹಾರಾಜರು ಏನೂ ಆಗಿಲ್ಲವೆಂಬಂತೆ ಸ್ಥಿತಪ್ರಜ್ಞರಾಗಿದ್ದರು. ಹೇಗೋ ಸ್ವಲ್ಪ ಉಳಿದದ್ದನ್ನು ತಿಂದು ಲಕ್ನೌಗೆ ತೆರಳಿದೆವು. ನಂತರ ಹಿಂದಿರುಗಿ ಬರುವಾಗ ಕಾಶಿಗೆ ಹೋಗಿದ್ದೆವು. ಒಂದು ದಿನ ಮಹಾರಾಜರಿಗೆ, ''ನಾಲ್ಕು ಕಾಸು ಕೊಡಿ, ಹುರಿದ ಕಡಲೆಕಾಯಿ ಕೊಳ್ಳುವೆ'' ಎಂದರೆ ಅವರು, ''ಕೊಡಬಲ್ಲೆ, ಆದರೆ ಅದನ್ನು ಮತ್ತೆ ಹಿಂದಿರುಗಿಸಬೇಕು'' ಎಂದರು. ನಾನೆಂದೆ, ''ಹಾಗಾದರೆ ನನಗೆ ಕಾಸು ಬೇಡ.'' ಅವರು ನನ್ನೊಡನೆ ತಮಾಷೆ ಮಾಡುತ್ತಿರುವರೆಂದು ನನಗೆ ಗೊತ್ತಿತ್ತು. ನಂತರ ನಗುತ್ತ ಹೇಳಿದರು, ''ನೋಡು, ಹಣದ ಬಗ್ಗೆ ನಾನು ತುಂಬ ಹುಷಾರಾಗಿರುತ್ತೇನೆ. ಒಮ್ಮೆ ಎಲ್ಲಿಗೋ ಹೋಗುವಾಗ ಹಿತಾನಂದ ಹಾಗೂ ವೀತಶೋಕಾನಂದ ಪಾನ್ ತಿನ್ನಲಿಚ್ಛಿಸಿದರು. ನಾನವರಿಗೆ ಹತ್ತು ರೂಪಾಯಿಗಳನ್ನು ಕೊಟ್ಟೆ. ಅವರು ಪಾನ್ ಅಂಗಡಿಯವನಿಗೆ ಆ ನೋಟನ್ನು ಕೊಟ್ಟಾಗ ಅವನ ಬಳಿ ಚಿಲ್ಲರೆ ಇಲ್ಲವೆಂದ. ಆಗ ಹಿತಾನಂದರು ಹೇಳಿದರು, ''ಅರೆ, ಇದು ವಿಜಯ್ ಮಹಾರಾಜರ ಹಣ, ಇದನ್ನೇನಾದರೂ ಮುರಿಯಲು ಸಾಧ್ಯವೆ?'' ತಮ್ಮ ಬಗ್ಗೆ ತಾವೇ ತಮಾಷೆ ಮಾಡಿದಾಗ ಅದು ಹಾಸ್ಯದ ಪರಮಾವಧಿ ಆಗುವುದಿಲ್ಲವೆ!

*(ಮುಂದಿನ ಸಂಚಿಕೆಗೆ)*